





ಒರಿಸ್ಸಾದ ಕೋಣಾರ್ಕ್, ಮಧ್ಯಪ್ರದೇಶದ ಖಜುರಾಹೊ ಎಂದ ಕೂಡಲೇ ನೆನಪಾಗುವುದೆಂದರೆ ಅಲ್ಲಿಯ ದೇವಾಲಯದ ಗೋಡೆಗಳ ಮೇಲೆ ಕೆತ್ತಲಾಗಿರುವ ಮಿಥುನ ಶಿಲ್ಪಗಳು. ಸ್ತ್ರೀ– ಪುರುಷರ ನಡುವೆ ನಾಲ್ಕು ಗೋಡೆಗಳ ಮಧ್ಯೆ ಖಾಸಗಿಯಾಗಿ ನಡೆಯುವ ಶೃಂಗಾರದ ಸೊಗಸನ್ನು ದೇವಾಲಯದ ಹೊರ ಭಿತ್ತಿಯ ಮೇಲೇ ಇಷ್ಟು ಬಹಿರಂಗವಾಗಿ ತೋರಿಸುವ, ವೈಭವೀಕರಿಸುವ ಈ ಶೃಂಗಾರ ಶಿಲ್ಪಗಳನ್ನು ಏಕೆ ಇಷ್ಟೊಂದು ಪ್ರಮಾಣದಲ್ಲಿ ಕೆತ್ತಲಾಯಿತು ಎಂಬುದು ಇನ್ನೂ ನಿಗೂಢ. ಈ ನಿಟ್ಟಿನಲ್ಲಿ ಹಲವಾರು ತಜ್ಞರು ವಿಶ್ಲೇಷಣೆ ಮಾಡಿದರೂ ರಹಸ್ಯವನ್ನು ಕರಾರುವಾಕ್ಕಾಗಿ ಭೇದಿಸಲು ಯಾರೊಬ್ಬರೂ ಯಶಸ್ವಿಯಾಗಿಲ್ಲ.

ಆ ಕಾಲದಲ್ಲಿ ಲೈಂಗಿಕ ಶಿಕ್ಷಣ ನೀಡಲು ರಾಜರು ಇಂತಹ ದೇವಸ್ಥಾನಗಳನ್ನು ಕಟ್ಟಿದರು; ದೇಗುಲ ಪ್ರವೇಶಿಸುವಾಗ ಎಲ್ಲಾ ಬಯಕೆಗಳನ್ನು ಬಿಟ್ಟು ಬರಬೇಕು, ಇಂತಹ ಶಿಲ್ಪಗಳಿಂದಲೂ ಚಿತ್ತ ವಿಕಾರವಾಗಬಾರದು ಎಂಬ ಉದ್ದೇಶದಿಂದ ಕಟ್ಟಿಸಿದ್ದು; ಭಾರತೀಯರಿಗೆ ಲೈಂಗಿಕತೆ ಎಂದರೆ ಭೋಗವಲ್ಲ, ಅಧ್ಯಾತ್ಮ ಎಂಬುದರ ಸೂಚಕವಿದು; ಸಂಸಾರದ ಸುಖದಿಂದ ಮೋಕ್ಷಕ್ಕೆ ಅಂದರೆ ದೇವರತ್ತ ಸಾಗುವುದರ ಸಂಕೇತ; ದೇಗುಲಗಳಲ್ಲಿದ್ದ ದೇವದಾಸಿಯರ ಬದುಕಿನ ನೊಟವಿದು.. ಹೀಗೆ ಹಲವಾರು ತರ್ಕಗಳಿದ್ದರೂ ಯಾವುದೇ ಖಚಿತ ತೀರ್ಮಾನಕ್ಕೆ ಇನ್ನೂ ಬರಲು ಸಾಧ್ಯವಾಗಿಲ್ಲ. ಅದೇನೇ ಇರಲಿ, ಇಂತಹ ದೇವಾಲಯಗಳು ಮಿಥುನ ಶಿಲ್ಪಗಳಿಂದಾಗೇ ಹೆಚ್ಚು ಖ್ಯಾತಿ ಪಡೆದಿವೆ ಎಂಬುದನ್ನು ಅಲ್ಲಗಳೆಯುವಂತಿಲ್ಲ.

ಈ ದೇವಾಲಯಗಳಲ್ಲಿ ಮುಂಚೂಣಿಯಲ್ಲಿರುವುದೆಂದರೆ ಮಧ್ಯಪ್ರದೇಶದ ಖಜುರಾಹೋದಲ್ಲಿರುವ ದೇವಾಲಯಗಳು. ಹಾಗೇ ಕೋಣಾರ್ಕದ ಸೂರ್ಯ ದೇವಾಲಯ, ಉದಯಪುರದ ಜಗದೀಶ ಮಂದಿರ, ಮಹಾರಾಷ್ಟ್ರದ ಮಾರ್ಕಂಡೇಶ್ವರ, ಗುಜರಾತ್‌ನ ಮೊಡೇರಾದ ಸೂರ್ಯ ದೇವಾಲಯ,

**ಪುಟ 42 ನೋಡಿ**